ಬೆಂಗಳೂರಿನಲ್ಲಿರುವ ಕೆರೆಗಳು

2259 (3167); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿರುವ ಹಾಲಿ ಉಳಿದಿರುವ ಕೆರೆಗಳ ಸಂಖ್ಯೆ ಎಷ್ಟು; ಅವು ಯಾವುವು; ಅವುಗಳ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು; 2013–14, 2014–15 ನೇ ಸಾಲಿನಲ್ಲಿ ಯಾವ ಯಾವ ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ; ವಿವರ ಒದಗಿಸುವುದು; ಇದಕ್ಕಾಗಿ ಒದಗಿಸಿರುವ ಅನುದಾನ ಹಾಗೂ ಖರ್ಚಾದ ಅನುದಾನದ ವಿವರ ಒದಗಿಸುವುದು;

ಆ) ಕೆಲವು ಕೆರೆಗಳಲ್ಲಿ ರಾಸಾಯನಿಕ ಪ್ರಕ್ರಿಯೆಯಿಂದ ನೊರೆ ಉಂಟಾಗಿ ಸುತ್ತಮುತ್ತಲ ಬಡಾವಣೆಗಳ ಜನರ ಆರೋಗ್ಯಕ್ಕೆ ಹಾನಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಕೆರೆಗಳನ್ನೂ ಸ್ವಚ್ಛಗೊಳಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) **ಬಿ.ಬಿ.ಎಂ.ಇ. ವತಿಯಿಂದ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಶದಲ್ಲಿ 85 ಕೆರೆಗಳಿದ್ದು, ಈವರೆವಿಗೂ ಒಟ್ಟು 49 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಕೆರೆಗಳ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, 3 ಕೆರೆಗಳ ಅಭಿವೃದ್ಧಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳು ಪ್ರಗತಿಯಲ್ಲಿರುತ್ತವೆ. 19 ಕೆರೆಗಳು ಮೂಲಸ್ವರೂಪ/ಇತರೆ ಉಪಯೋಗಕ್ಕಾಗಿ ಬಳಕೆಯಾಗುತ್ತಿದ್ದು ಸದರಿ ಕೆರೆಗಳಲ್ಲಿನ ಅತಿಕ್ರಮಣಗಳನ್ನು ತೆರವುಗೊಳಿಸಿದ ನಂತರ ಅಭಿವೃದ್ಧಿಗೊಳಿಸುವ ಕ್ರಮ ಕೈಗೊಳ್ಳಲಾಗುವುದು. ವಿವರ **ಅನುಬಂಧ–1** ರಲ್ಲಿ ನೀಡಿದೆ.

85 ಕೆರೆಗಳ ಪೈಕಿ 10 ಕೆರೆಗಳನ್ನು 2013–14 ನೇ ಸಾಲಿನಲ್ಲಿ ಅಭಿವೃದ್ಧಿ ಪಡಿಸಲಾಗಿದೆ. 10 ಕೆರೆಗಳನ್ನು 2014–15 ನೇ

ಸಾಲಿನಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ವಿವರ **ಅನುಬಂಧ–2** ರಲ್ಲಿ ನೀಡಿದೆ.

2013–14 ನೇ ಸಾಲಿನಲ್ಲಿ ಸರ್ಕಾರದಿಂದ ₹ 50.00 ಕೋಟಿಗಳನ್ನು ಮತ್ತು ಪಾಲಿಕೆ ವತಿಯಿಂದ ₹ 10.00 ಕೋಟಿಗಳನ್ನು ಮತ್ತು 2013–14 ನೇ ಸಾಲಿನಲ್ಲಿ ಸರ್ಕಾರದಿಂದ ₹ 40.00 ಕೋಟಿಗಳನ್ನು ಮತ್ತು ಪಾಲಿಕೆ ವತಿಯಿಂದ ₹ 37.50 ಕೋಟಿಗಳ ಅನುದಾನ ನೀಡಿದ್ದು, ಇದಕ್ಕಾಗಿ ಖರ್ಚಾದ ಅನುದಾನದ ವಿವರ **ಅನುಬಂಧ–2** ರಲ್ಲಿ ನೀಡಿದೆ.

ಬಿ.ಡಿ.ಎ. ವತಿಯಿಂದ:

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಒಟ್ಟು 117 ಕೆರೆಗಳಿದ್ದು ಇವುಗಳಲ್ಲಿ 98 ಜೀವಂತ ಕೆರೆಗಳು, 16 ಒಣಗಿದ ಕೆರೆಗಳು ಮತ್ತು 3 ಅನುಪಯುಕ್ತ ಕೆರೆಗಳಿರುತ್ತವೆ. ಇವುಗಳ ಪಟ್ಟಿಯನ್ನು **ಅನುಬಂಧ–3** ರಲ್ಲಿ ನೀಡಿದೆ.

ಬಹುತೇಕ ಕೆರೆಗಳು ಬಿಬಿಎಂಪಿ ವಾರ್ಡುಗಳಲ್ಲಿದ್ದು ಈ ಕೆರೆಗಳ ಅಭಿವೃದ್ಧಿಗೆ ಸರ್ಕಾರದಿಂದ ಇದೂವರೆಗೆ ಯಾವುದೇ ಅನುದಾನ ನೀಡಿರುವುದಿಲ್ಲ. ಕೆರೆಗಳ ಅಭಿವೃದ್ಧಿಯನ್ನು ಪ್ರಾಧಿಕಾರದ ಸಂಪನ್ಮೂಲದಿಂದ ಹಂತ ಹಂತವಾಗಿ ಕೈಗೊಳ್ಳಲು ಯೋಜಿಸಲಾಗಿದೆ.

2012–13 ನೇ ಸಾಲಿನವರೆಗೆ ಒಟ್ಟ 12 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದ್ದು, 2013–14 ಮತ್ತು 2014–15 ರಲ್ಲಿ ಒಟ್ಟು 17 ಕೆರೆಗಳ ಅಭಿವೃದ್ಧಿ ಕಾಮಗಾರಿಯನ್ನು ಆರಂಭಿಸಲಾಗಿದ್ದು ಈ ಕಾಮಗಾರಿಗಳು ಈಗ ಪ್ರಗತಿಯಲ್ಲಿರುತ್ತವೆ. ಅಭಿವೃದ್ಧಿ ಪೂರ್ಣಗೊಳಿಸಿರುವ ಮತ್ತು ಪ್ರಗತಿಯಲ್ಲಿರುವ ಕೆರೆಗಳ ಪಟ್ಟಿಯನ್ನು ಅನುಬಂಧ–4 ರಲ್ಲಿ ನೀಡಿದೆ

ಬಹುತೇಕ ಕೆರೆಗಳು ಬಿ.ಬಿ.ಎಂ.ಪಿ. ವಾರ್ಡುಗಳಲ್ಲಿದ್ದು ಈ ಕೆರೆಗಳ ಅಭಿವೃದ್ಧಿಗಾಗಿ ಸರ್ಕಾರದಿಂದ ಪ್ರಾಧಿಕಾರಕ್ಕೆ ಇದೂವರೆಗೆ

ಯಾವುದೇ ಅನುದಾನ ನೀಡಿರುವುದಿಲ್ಲ. ಪ್ರಾಧಿಕಾರವು ತನ್ನ ಸ್ವಂತ ಸಂಪನ್ಮೂಲದಿಂದ ಕೆರೆಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸುತ್ತಿದೆ. 2013–14 ಮತ್ತು 2014–15 ನೇ ಸಾಲಿನಲ್ಲಿ ಕ್ರಮವಾಗಿ ₹ 1597 ಲಕ್ಷ ಮತ್ತು ₹ 14.76 ಲಕ್ಷಗಳ ವೆಚ್ಚವನ್ನು ಪ್ರಾಧಿಕಾರದಿಂದ ಭರಿಸಲಾಗಿದೆ.

ಆ) ಬಂದಿದೆ.

ಬೆಂಗಳೂರಿನ ಬೆಳ್ಳಂದೂರು ಮತ್ತು ವರ್ತೂರು ಕೆರೆಗಳಿಗೆ ರಾಸಾಯನಿಕ ಯುಕ್ತ ತ್ಯಾಜ್ಯ ನೀರು ಹರಿದು ನೊರೆ ಸೃಷ್ಟಿಯಾಗುತ್ತಿದೆ. ಕೆರೆಗಳಲ್ಲಿ ಸೃಷ್ಟಿಯಾಗುತ್ತಿರುವ ರಾಸಾಯನಿಕ ನೊರೆಯನ್ನು ತಡೆಗಟ್ಟಲು ಈಗ ಬಿ.ಬಿ.ಎಂ.ಪಿ. ಯಿಂದ ತಾತ್ಕಾಲಿಕ ಕ್ರಮ ಕೈಗೊಳ್ಳಲಾಗುತ್ತಿದೆ.

ಶಾಶ್ವತವಾಗಿ ತಡೆಗಟ್ಟಲು ಬೊಮ್ಮನಹಳ್ಳಿ ವಲಯ, ಮಹದೇವಪುರ ವಲಯ ಮತ್ತು ನಗರ ಕೇಂದ್ರ ಪ್ರದೇಶಗಳಿಂದ ತ್ಯಾಜ್ಯ ನೀರನ್ನು ರಾಜ ಕಾಲುವೆಯ ಬದಲು ಮುಖ್ಯ ಕೊಳವೆ ಮಾರ್ಗಗಳ ಮೂಲಕ ಹೊಸದಾಗಿ ಅಳವಡಿಸುವ ಜಲಸಂಸ್ಕರಣಾ ಘಟಕಗಳಿಗೆ ಸಾಗಿಸಿ ಶುದ್ಧೀಕರಿಸಲು ಮತ್ತು ನಗರದ ಬಡಾವಣೆಗಳಲ್ಲಿರುವ ಎಲ್ಲಾ ಮನೆಗಳಿಗೆ ಒಳಚರಂಡಿ ಸಂಪರ್ಕ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗಳನ್ನು ಬೆಂಗಳೂರು ಜಲ ಮಂಡಳಿಯಿಂದ ಕೈಗೊಳ್ಳಲಾಗುತ್ತಿದೆ.

ಬೆಂಗಳೂರು ಜಲಮಂಡಳಿ ವತಿಯಿಂದ:

ಬೆಂಗಳೂರು ನಗರದ ಒಳಚರಂಡಿ ವ್ಯವಸ್ಥೆಯು ಸುಮಾರು 50 ವರ್ಷಗಳ ಹಿಂದೆ ಅಳವಡಿಸಲಾಗಿದ್ದು ನಂತರದ ದಿನಗಳಲ್ಲಿ ನಗರವು ಬೃಹದಾಕಾರವಾಗಿ ಬೆಳೆದಿರುವುದು. ಕೊಳವೆಮಾರ್ಗಗಳಿರುವ ಜಾಗಗಳಲ್ಲಿ ಒತ್ತುವರಿಯಾಗಿರುವುದು ಹಾಗೂ ಈ ವ್ಯವಸ್ಥೆಯು ಹಲವಾರು ವರ್ಷಗಳ ಕಾಲ ನಿರಂತರವಾಗಿ

ಕಾರ್ಯನಿರ್ವಹಿಸಿರುವುದು, ಕೆಲವು ಅನಧಿಕೃತ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯನೀರು ನೇರವಾಗಿ ಮಳೆನೀರಿನ ಕಾಲುವೆಗೆ ಹರಿಯುವುದು ಈ ಎಲ್ಲಾ ಕಾರಣಗಳಿಂದ ಒಳಚರಂಡಿ ವ್ಯವಸ್ಥೆಯನ್ನು ಸಮರ್ಪಕ ರೀತಿಯಲ್ಲಿ ಕಾರ್ಯನಿರ್ವಹಿಸಿ ತ್ಯಾಜ್ಯನೀರನ್ನು ಸಂಸ್ಕರಣಾ ಘಟಕಗಳಿಗೆ ಸಾಗಿಸಲು ಮಂಡಳಿಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಕೆಲವು ಭಾಗದ ತ್ಯಾಜ್ಯನೀರು ಮಳೆನೀರು ಕಾಲುವೆಗಳಲ್ಲಿ ಹರಿದು ನೇರವಾಗಿ ಕೆರೆ ಕಾಲುವೆಗಳಿಗೆ ಸೇರುತ್ತಿದೆ. ಮಂಡಳಿಯು ಮಳೆನೀರಿನ ಕಾಲುವೆಗಳಲ್ಲಿ ಹರಿಯುತ್ತಿರುವ ತ್ಯಾಜ್ಯನೀರನ್ನು ತಡೆಗಟ್ಟಿ ಈ ನೀರನ್ನು ಸಂಸ್ಕರಣಾ ಘಟಕಗಳಿಗೆ ಸಾಗಿಸಲು ಅನುವಾಗುವಂತೆ ಕೆಲವು ಬೃಹತ್ ಮೊತ್ತದ ಯೋಜನೆಗಳನ್ನು ಹಂತ ಹಂತವಾಗಿ ಕೈಗೊಂಡಿದೆ. ಇವುಗಳ ವಿವರಳು ಈ ಕೆಳಕಂಡಂತಿದೆ:

ಮೊದಲನೆ ಹಂತದಲ್ಲಿ 33 ಕಿಲೋ ಮೀ. ಗಳಷ್ಟು ಕೊಳವೆ ಮಾರ್ಗಗಳ ಪುನರುಜ್ಜೀವನ ಕಾಮಗಾರಿಗಳನ್ನು 54 ಕೋಟಿ ರೂ. ಗಳ ಮೊತ್ತದಲ್ಲಿ ತೆಗೆದುಕೊಂಡು ಡಿಸೆಂಬರ್ 2010 ರಲ್ಲಿ ಪೂರ್ಣ ಮಾಡಲಾಗಿದೆ. ಈ ಯೋಜನೆಯ ಅನುಷ್ಠಾನದಿಂದ ಮಳೆ ನೀರಿನ ಕಾಲುವೆಗಳಲ್ಲಿ ಹರಿದು ನೇರವಾಗಿ ಕೆರೆಗಳಿಗೆ ಸೇರುತ್ತಿದ್ದ ಸುಮಾರು 40 ದಶ ಲಕ್ಷ ಲೀಟರ್ ದಿನಃಪ್ರತಿ ಕೊಳಚೆ ನೀರನ್ನು ಕೊಳವೆಗಳ ಮೂಲಕ ಸಂಸ್ಕರಣಾ ಘಟಕಗಳಿಗೆ ಹರಿಯಬಿಡಲಾಗಿದೆ.

ಹೆಬ್ಬಾಳ ಕಣಿವೆಯ ಮಳೆನೀರಿನ ಕಾಲುವೆಗಳಲ್ಲಿ ಹರಿಯುತ್ತಿರುವ ಕೊಳಚೆ ನೀರನ್ನು ಪೂರ್ಣವಾಗಿ ತಡೆಗಟ್ಟಲು 18 ಕಿ.ಮೀ. ಹೊಸದಾಗಿ ಒಳಚರಂಡಿ ಕೊಳವೆಗಳನ್ನು ಅಳವಡಿಸಲು ಒಟ್ಟು 45.00 ಕೋಟಿ ರೂ. ಗಳ ಯೋಜನೆಯನ್ನು ಕೆ.ಯು.ಐ.ಡಿ.ಎಫ್.ಸಿ. ಯ ಮೆಗಾಸಿಟಿ ರಿವಾಲ್ವಿಂಗ್ ಫಂಡ್ ಯೋಜನೆಯಡಿಯಲ್ಲಿ 50% ಹಣವನ್ನು ಸಾಲಸೌಲಭ್ಯದಲ್ಲಿ ಮತ್ತು ಉಳಿದ 50% ಹಣವನ್ನು ಜಲಮಂಡಲಿಯ ಆರ್ಥಿಕ ನಿಧಿಯಿಂದ ಒಟ್ಟು 5 ಪ್ಯಾಕೇಜ್‌ಗಳಲ್ಲಿ ಕೈಗೊಳ್ಳಲಾಗಿದ್ದು ಈಗ ಈ ಯೋಜನೆಯು

ಪೂರ್ಣಗೊಂಡಿದೆ. ಈ ಯೋಜನೆಯ ಅನುಷ್ಠಾನದಿಂದ ಸಹ ಮಳೆನೀರು ಕಾಲುವೆಗಳಲ್ಲಿ ಹರಿಯುತ್ತಿರುವ ಸುಮಾರು 40 ದಶಲಕ್ಷ ಲೀಟರ್ ದಿನಂಪ್ರತಿ ಕೊಳಚೆ ನೀರನ್ನು ಕೊಳವೆಗಳ ಮೂಲಕ ಸಂಸ್ಕರಣಾ ಘಟಕಕ್ಕೆ ಹರಿಯಬಿಡಲಾಗಿದೆ.

ಬೆಂಗಳೂರು ನಗರದ 70 ಕಿ.ಮೀ. ತ್ಯಾಜ್ಯ ನೀರಿನ ಕೊಳವೆ ಮಾರ್ಗಗಳ ಪುನರುಜ್ಜೀವನಗೊಳಿಸುವ ಕೆಲಸಗಳ ಯೋಜನೆಯನ್ನು ₹ 176.75 ಕೋಟಿಗಳ ಮೊತ್ತದಲ್ಲಿ ಕೇಂದ್ರ ಸರ್ಕಾರದ ನರ್ಮ್ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗಿದೆ. ಈ ಯೋಜನೆಯನ್ನು ಒಟ್ಟು 16 ಪ್ಯಾಕೇಜುಗಳಲ್ಲಿ ತೆಗೆದುಕೊಳ್ಳಲಾಗಿದೆ ಹಾಗೂ ಈ ಯೋಜನೆಯ ಪರಿಷ್ಕೃತ ಅಂದಾಜು ವೆಚ್ಚವು ₹ 490.00 ಕೋಟಿಗಳಾಗಿವೆ. ಈಗಾಗಲೇ 6 ಪ್ಯಾಕೇಜುಗಳ ಕಾಮಗಾರಿಗಳು ಪೂರ್ಣಗೊಂಡಿವೆ ಹಾಗೂ 5 ಪ್ಯಾಕೇಜ್ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ. 4 ಪ್ಯಾಕೇಜುಗಳ ಕಾಮಗಾರಿಗಳ ಪ್ರಗತಿಯು ವಿವಿಧ ಹಂತಗಳಲ್ಲಿವೆ. ಉಳಿದ ಒಂದು ಪ್ಯಾಕೇಜು ಕಾಮಗಾರಿಗೆ ಪಡೆಯಲಾಗಿದ್ದ ಬಿಡ್ ಹೆಚ್ಚಿನ ಬೆಲೆಯದಾಗಿದ್ದ ಕಾರಣ ಸದರಿ ಬಿಡ್ ರದ್ದುಪಡಿಸಿ ಮರುಟೆಂಡರ್ ಕರೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಯೋಜನೆಯ ಭೌತಿಕ ಪ್ರಗತಿ ಶೇ. 80 ರಷ್ಟಾಗಿದೆ ಹಾಗೂ ಆರ್ಥಿಕ ಪ್ರಗತಿ ಶೇ. 62 ರಷ್ಟಾಗಿದೆ. ಈ ಯೋಜನೆಯ ಎಲ್ಲಾ ಕಾಮಗಾರಿಗಳನ್ನು 2016 ರ ಅಂತ್ಯದಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಈ ಯೋಜನೆಯ ಅನುಷ್ಠಾನದ ನಂತರ ಈಗ ಮಳೆನೀರು ಕಾಲುವೆಗಳಲ್ಲಿ ಹರಿಯುತ್ತಿರುವ ಸುಮಾರು 150 ದಶಲಕ್ಷ ಲೀಟರ್ ತ್ಯಾಜ್ಯನೀರನ್ನು ಸಂಸ್ಕರಣೆ ಘಟಕಗಳಿಗೆ ಸಾಗಿಸಬಹುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸೇರ್ಪಡೆಯಾದ 7 ನಗರಸಭೆ ಮತ್ತು 1 ಪುರಸಭೆ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ಅಳವಡಿಸುವ ₹ 1191 ಕೋಟಿಗಳ ಮೊತ್ತದ

ಕಾಮಗಾರಿಗಳನ್ನು ಕೆ.ಎಂ.ಆರ್.ಪಿ. ಯೋಜನೆಯಡಿಯಲ್ಲಿ ವಿಶ್ವಬ್ಯಾಂಕ್ ಹಾಗೂ ನರ್ಮ್ ನೆರವಿನೊಂದಿಗೆ ಕೈಗೊಳ್ಳಲಾಗಿದೆ. ಈ ಯೋಜನೆಯನ್ನು 2015 ರ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು.

ಈ ಯೋಜನೆಗಳ ಜೊತೆಗೆ ಮಂಡಳಿಯು ಕಾವೇರಿ ನೀರು ಸರಬರಾಜು ಯೋಜನೆ 4 ನೇ ಹಂತ 2 ನೇ ಘಟ್ಟದಲ್ಲಿ ನಗರದ ವಿವಿಧ ಪ್ರದೇಶಗಳಲ್ಲಿ ಒಟ್ಟು 339 ದಶಲಕ್ಷ ಲೀಟರ್ ಸಾಮರ್ಥ್ಯದ 11 ಹೊಸ ಕೊಳಚೆ ನೀರಿನ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಈ ಘಟಕಗಳ ಕಾಮಗಾರಿಗಳನ್ನು ಆಗಸ್ಟ್ 2016 ರ ವೇಳೆಗೆ ಪೂರ್ಣಗೊಳಿಸಲಾಗುವುದು.

ಇದರ ಜೊತೆ ಮಂಡಳಿಯು ಈ ಕೆಳಕಂಡ ಹೊಸ ಯೋಜನೆಗಳನ್ನು ಸಹ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ. ಈ ಯೋಜನೆಗಳ ಸವಿಸ್ತಾರವಾದ ಯೋಜನಾ ವರದಿಗಳನ್ನು ತಯಾರಿಸಲಾಗುತ್ತಿದೆ ಹಾಗೂ 2015–16 ನೇ ಸಾಲಿನಲ್ಲಿ ಈ ಯೋಜನೆಗಳನ್ನು ಕರ್ನಾಟಕ ನಗರ ಮೂಲಭೂತ ಸೌಕರ್ಯ ಹಾಗೂ ಹಣಕಾಸು ಸಂಸ್ಥೆ, ಹಾಗೂ ರಾಜ್ಯ ಸರ್ಕಾರ ಹಾಗೂ ಮಂಡಳಿಯ ವತಿಯಿಂದ ಕ್ರಮವಾಗಿ 50%, 25% ಮತ್ತು 25% ಆರ್ಥಿಕ ನೆರವಿನ ಮಾದರಿಯಲ್ಲಿ ತೆಗೆದುಕೊಳ್ಳಲಾಗುವುದು.

1. ವೃಷಭಾವತಿ ಕಣಿವೆಯಲ್ಲಿ 150 ದಶಲಕ್ಷ ಲೀಟರ್ ಸಾಮರ್ಥ್ಯದ ನೂತನ ಕೊಳಚೆ ನೀರು ಸಂಸ್ಕರಣಾ ಘಟಕ.
2. ಕೋರಮಂಗಲ ಕ್ರೀಡಾ ಸಂಕೀರ್ಣದಲ್ಲಿ ಕೊಳಚೆ ನೀರು ಪಂಪಿಂಗ್ ಠಾಣೆ ಸ್ಥಾಪನೆ.
3. ಹೆಬ್ಬಾಳದಲ್ಲಿ 100 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ಹೆಚ್ಚುವರಿ ತ್ಯಾಜ್ಯನೀರಿನ ದ್ವಿತೀಯ ಹಂತದ ಸಂಸ್ಕರಣಾ ಘಟಕ.

4. ಕೆ.ಆರ್. ಪುರಂ ನಲ್ಲಿ 20 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ಹೆಚ್ಚುವರಿ ತ್ಯಾಜ್ಯನೀರಿನ ದ್ವಿತೀಯ ಹಂತದ ಸಂಸ್ಕರಣಾ ಘಟಕ.
5. ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆಯಲ್ಲಿ 150 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ಹೆಚ್ಚುವರಿ ತ್ಯಾಜ್ಯನೀರಿನ ದ್ವಿತೀಯ ಹಂತದ ಸಂಸ್ಕರಣಾ ಘಟಕ.
6. ಬೆಂಗಳೂರು ವಿಶ್ವವಿದ್ಯಾನಿಲಯದ ಬಳಿ 60 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ಹೆಚ್ಚುವರಿ ತ್ಯಾಜ್ಯನೀರಿನ ದ್ವಿತೀಯ ಹಂತದ ಸಂಸ್ಕರಣಾ ಘಟಕ.
7. ದೊಡ್ಡ ಬೆಲೆಯಲ್ಲಿ 40 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ತ್ಯಾಜ್ಯನೀರಿನ ದ್ವಿತೀಯ ಹಂತದ ಸಂಸ್ಕರಣಾ ಘಟಕ.

ಮುಂದೆ ಮಂಡಲಿಯು ಮೂರನೆಯ ಹಂತದ ಪರಿಸರ ಕ್ರಿಯಾ ಯೋಜನೆಯನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ. ಈ ಯೋಜನೆಯಲ್ಲಿ ನಗರದ ಉಳಿದ 74 ಕಿ.ಮೀ. ಉದ್ದದ ಕೊಳವೆ ಮಾರ್ಗಗಳ ಪುನರುಜ್ಜೀವನ ಕಾಮಗಾರಿಗಳು ಸೇರಿದೆ. ಈ ಕಾಮಗಾರಿಗಳ ವಿವರವಾದ ಯೋಜನಾ ವರದಿಯನ್ನು 500 ಕೋಟಿ ರೂ. ಗಳ ಮೊತ್ತದಲ್ಲಿ ತಯಾರಿಸಲಾಗುತ್ತಿದೆ. ಈ ಯೋಜನೆಯನ್ನು ಕರ್ನಾಟಕ ನಗರ ಮೂಲಭೂತ ಸೌಕರ್ಯ ಹಾಗೂ ಹಣಕಾಸು ಸಂಸ್ಥೆ ಮತ್ತು ರಾಜ್ಯ ಸರ್ಕಾರದ ಆರ್ಥಿಕ ನೆರವಿನಿಂದ ತೆಗೆದುಕೊಳ್ಳಲು ಯೋಜಿಸಲಾಗಿದೆ. ಹಣಕಾಸಿನ ನೆರವು ದೊರೆತ ಮೇಲೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ನಾಲ್ಕು ವರ್ಷಗಳ ಕಾಲಾವಕಾಶ ಬೇಕಾಗುವುದು.

ಮುಂದುವರೆದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 110 ಹಳ್ಳಿಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಜಲಮಂಡಲಿಯು ಕೇಂದ್ರ ಸರ್ಕಾರದ ಸಿ.ಪಿ.ಹೆಚ್.ಇ.ಇ.ಓ ಸಂಸ್ಥೆಯ

ನಿರ್ದೇಶನದಂತೆ ₹ 4310 ಕೋಟಿಗಳ ಮೊತ್ತದ ಒಂದು ಪರಿಷ್ಕೃತ ಸವಿಸ್ತಾರವಾದ ಯೋಜನಾ ವರದಿಯನ್ನು ತಯಾರಿಸಿ ರಾಜ್ಯ ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗಿದೆ. ಈ ಯೋಜನಾವರದಿಗೆ ಅನುಮೋದನೆ ದೊರೆತ ಮೇಲೆ ಇದನ್ನು ತಾಂತ್ರಿಕ ಅನುಮೋದನೆ ಪಡೆಯಲು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು. ತದನಂತರ ಹಣಕಾಸು ಸಂಸ್ಥೆಗಳಿಂದ ಆರ್ಥಿಕ ನೆರವು ಪಡೆಯುವ ಯೋಜನೆಯನ್ನು ತೆಗೆದುಕೊಳ್ಳಲಾಗುವುದು. ಈ ಯೋಜನೆಗೆ ಹಣಕಾಸಿನ ನೆರವು ದೊರೆತ ಮೇಲೆ ಅನುಷ್ಠಾನಗೊಳಿಸಲು ಸುಮಾರು ನಾಲ್ಕು ವರ್ಷಗಳ ಕಾಲಾವಕಾಶ ಬೇಕಾಗುವುದು.

ಮೇಲೆ ತಿಳಿಸಿರುವ ಎಲ್ಲಾ ಯೋಜನೆಗಳನ್ನು ಪೂರ್ಣಮಾಡಲು ಸುಮಾರು 3 ರಿಂದ 4 ವರ್ಷ ಕಾಲಾವಕಾಶ ಬೇಕಾಗುವುದು. ತದ ನಂತರ ನಗರದ ಮಳೆ ನೀರು ಕಾಲುವೆಗಳಲ್ಲಿ ಹರಿದು ನೇರವಾಗಿ ಕೆರೆಗಳಿಗೆ ಹರಿಯುವ ತ್ಯಾಜ್ಯನೀರನ್ನು ಬಹುತೇಕ ತಪ್ಪಿಸಬಹುದು ಹಾಗೂ ಕೆರೆಗಳ ಮಾಲಿನ್ಯವನ್ನು ಗಣನೀಯವಾಗಿ ಸುಧಾರಿಸಬಹುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅನುಬಂಧ-1

ಅಭಿವೃದ್ಧಿ ಪಡಿಸಿರುವ ಕೆರೆಗಳ ವಿವರ

ಕ್ರಮ ಸಂಖ್ಯೆ	ಕೆರೆಯ ಹೆಸರು	ಗ್ರಾಮದ ಹೆಸರು ಹಾಗೂ ಸರ್ವೆ ನಂ	ಒಟ್ಟು ವಿಸ್ತೀರ್ಣ	
			ಎಕರೆ	ಗುಂಟೆ
1	ಅಂಬಲೀಪುರ ಕಳಗಿನ ಕೆರೆ	ಅಂಬಲೀಪುರ - 40, 41	7.00	9.00
2	ಕೆಳಗೊಂಡನಹಳ್ಳಿ ಕೆರೆ	ಕೆಳಗೊಂಡನಹಳ್ಳಿ -8, ಕಸವನಹಳ್ಳಿ-70	49.00	7.00
3	ವಿಜಿನಾಪುರ ಕೆರೆ	ಕೊಡೇನಹಳ್ಳಿ - 85	11.00	28.00
4	ಅಂಬಲೀಪುರ ಮೇಲಿನ ಕೆರೆ	ಅಂಬಲೀಪುರ - 36	12.00	16.00
5	ಕೀಗೆಹಳ್ಳಿ ಕೆರೆ	ಕೀಗೆಹಳ್ಳಿ -0032	31.00	13.00
6	ದೇವಸಂದ್ರ ಕೆರೆ	ದೇವಸಂದ್ರ -31	16.00	8.00
7	ದೊಡ್ಡಕನ್ನೆಲಿ ಕೆರೆ	ದೊಡ್ಡಕನ್ನೆಲಿ-109	18.00	14.00
8	ಮುನ್ನೆಕೊಳ್ಳಲು ಕೆರೆ	ಮುನ್ನೆಕೊಳ್ಳಲು-0025	15.00	38.00
9	ಲಿಲುವಂತನ್ನ ಕೆರೆ	ನೈಸ್ ಪಾರ್ಕ್-0041	19.00	32.00
10	ಕಸವನಹಳ್ಳಿ ಕೆರೆ	ಕೆಳೆಕೊರು -32, ಕಸವನಹಳ್ಳಿ - 50	55.00	8.00
11	[illegible] ಕೆರೆ	[illegible] -0015	11.00	39.00
12	ಕೊಡೇನಹಳ್ಳಿ ಕೆರೆ	ಕೊಡೇನಹಳ್ಳಿ -0027 ಕೆ ಆರ್ ಪುರಂ	55.00	5.00

13	ಹರಳೂರು ಕೆರೆ	ಹರಳೂರು -95	31.00	22.00
14	ಸೂಳೆ ಕೆರೆ	ಧೈರ್ಯಂದೂರು - 65, ದೊಡ್ಡಕಣ್ಣಲಿ-68. ಕೈಗೊಂಡನಹಳ್ಳಿ-36	61.00	37.00
15	ಮೋದೆಕೆರೆ	ವಸಂತಪುರ-06. ಉತ್ತರಹಳ್ಳಿ-22	28.00	17.00
16	ಉತ್ತರಹಳ್ಳಿ	ಉತ್ತರಹಳ್ಳಿ-111	15.00	16.00
17	ಯಡಿಯೂರು	ದಾಸರಹಳ್ಳಿ-1, 2,9/1-9/4 &10. ಯಡಿಯೂರು-0059	18.00	2.00
18	ಮುಟ್ಟೇನಹಳ್ಳಿ	ಮುಟ್ಟೇನಹಳ್ಳಿ-42	13.00	25.00
19	ಸಿಂಗಸಂದ್ರ ಕೆರೆ	ಸಿಂಗಸಂದ್ರ- 99	11.00	9.00
20	ದೀಪಾಂಜಲಿ ಕೆರೆ	ದೀಪಾಂಜಲಿ ರಾಮನಹಳ್ಳಿ-32	7.00	22.00
21	ಹಲಗೇವಡೇರಹಳ್ಳಿ ಕೆರೆ	ಹಲಗೇವಡೇರಹಳ್ಳಿ-1	17.00	10.00
22	ಪರಪ್ಪನ ಅಗ್ರಹಾರ ಕೆರೆ	ಪರಪ್ಪನ ಅಗ್ರಹಾರ - 23	16.00	11.00
23	ಕೆಂಪಾಂಬುಧಿ ಕೆರೆ	ಕೆಂಪಾಂಬುಧಿ ಕೆರೆ-2	47.00	7.00
24	ಹೇರೋಹಳ್ಳಿ ಕೆರೆ	ಹೇರೋಹಳ್ಳಿ ಗ್ರಾಮ, ಸರ್ವೆ ನಂ-99	34.00	33.00
25	ವಿಂಗಧೀರನಹಳ್ಳಿ ಕೆರೆ	ವಿಂಗಧೀರನಹಳ್ಳಿ ಗ್ರಾಮ, ಸರ್ವೆ ನಂ-2 & 4	10.00	10.00
26	ಹಂದ್ರಹಳ್ಳಿ ಕೆರೆ	ಹಂದ್ರಹಳ್ಳಿ-8	16.00	6.00

ಕ್ರಮ ಸಂಖ್ಯೆ	ಕೆರೆಯ ಹೆಸರು	ಗ್ರಾಮದ ಹೆಸರು ಮತ್ತು ಹೋಬಳಿ ಸರ್ವೆ ನಂ	ಮೀನು ಗುತ್ತಿಗೆ	
			ಎಕರೆ	ರೂಪಾಯಿ
27	ಯಲಚೇಹಳ್ಳಿ ಕೆರೆ	ಯಲಚೇಹಳ್ಳಿ -0035	9.00	25.00
28	ಚಿ.ಹೊಸಹಳ್ಳಿ (ಮುಖ್ಯಕೆರೆ)	ಹೊಸಹಳ್ಳಿ -0052,	47.00	26.00
		ಸುಣ್ಣಘಟ್ಟ - 59,	15.00	15.00
		ಚಿಕ್ಕಬೆಳವಂಗಲ -1	20.00	39.00
29	ಮಾಲಗಾವ ಕೆರೆ	ಮಾಲಗಾವ-26	6.00	26.00
30	ಬಾಚಹಳ್ಳಿ ಕೆರೆ	ಬಾಚಹಳ್ಳಿ 24 ಕೆ ಹೊಸಹಳ್ಳಿಗುಡ್ಡ-5	27.00	35.00
31	ಹಳ್ಳಿಕೆರೆ ಹಿಂಡ್ಲಾಪ	ಸೀಗುಂದಿಅಮಾನಿ-21	40.00	24.00
32	ಹುಲಿಕಲು	ಹುಲಿಕಲು	108.00	8.00
33	ಮಿಂಡಿಕಟ್ಟೆ ಕೆರೆ	ಮಿಂಡಿಕಟ್ಟೆ -101, ಗಿಡ್ಡಪಲಿಂಗನಹಳ್ಳಿ-6	71.00	5.00
34	ಬಂಗಾಳ ಕೆರೆ	ಬಂಗಾಳ-93	24.00	12.00
35	ಚಟ್ಟಿಗನಹಳ್ಳಿ ಕೆರೆ	ಚಟ್ಟಿಗನಹಳ್ಳಿ -031	20.00	10.00
36	ತಿಂಡಿಮನಹಳ್ಳಿ ಕೆರೆ	ತಿಂಡಿಮನಹಳ್ಳಿ -61,73,72,71,70,69,33,32,31	22.00	27.00
37	ಅಗ್ರಹಾರ ಕೆರೆ	ಅಗ್ರಹಾರ -0033	15.00	33.00

38	ಕೋಗಿಲು ಕೆರೆ	ಕೋಗಿಲು-84	40.00	4.00
		ಹುಳಿಗೇನಹಳ್ಳಿ-117	33.00	24.00
39	ಯಲಹಂಕ	ಯಲಹಂಕ-29	53.00	36.00
		ಕೆಂಚೇನಹಳ್ಳಿ-15	30.00	23.00
		ಜಕ್ಕೂರು-39	199.00	31.00
		ಮಂಚೇನಹಳ್ಳಿ-19	7.00	34.00
		ಮುದ್ದೇನಹಳ್ಳಿ-45	8.00	18.00
40	ವೀರಸಾಗರ	ವೀರಸಾಗರ 26	17.00	24.00
		ಅಟ್ಟೂರು 25	3.00	30.00
41	ಅಟ್ಟೂರು	ಅಟ್ಟೂರು-81	56.00	23.00
		ಅನಂತಪುರ-92	6.00	15.00
		ರಾಮಗೊಂಡನಹಳ್ಳಿ-39	7.00	22.00
		ಕೆಂಪನಹಳ್ಳಿ-12	19.00	18.00
42	ನರಸೀಮರ ಕೆರೆ ಸರ್ವೆ ನಂ-20	ನರಸೀಮರ ಗ್ರಾಮ, ಸರ್ವೆ ನಂ-20.	15.00	30.00
43	ಜೊಕ್ಕನಹಳ್ಳಿ	ಜೊಕ್ಕನಹಳ್ಳಿ-2	8.00	2.00
44	ರಾಮಗೊಂಡನಹಳ್ಳಿ	ರಾಮಗೊಂಡನಹಳ್ಳಿ-52	36.00	26.00
45	ಅಳ್ಳಾಲಸಂದ್ರ ಕೆರೆ	ಅಳ್ಳಾಲಸಂದ್ರ - 15	41.00	23.00
46	ಅವಲಹಳ್ಳಿ ಕೆರೆ	[illegible] ಸರ್ವೆ ನಂ-10 ಸಂಗನಾಯಕನಹಳ್ಳಿ ಸರ್ವೆ ನಂ-104	13.00	29.00

ಕ್ರಮ ಸಂಖ್ಯೆ	ಕೆರೆಯ ಹೆಸರು	ಗ್ರಾಮದ ಹೆಸರು ಹೋಬಳಿ ಹೆಸರು ಸರ್ವೆ ನಂ	ಬಿಡ್ಡಿ ವಿವರಗಳು	
			ಬಿಡ್ಡಿ	ಠೇವಣಿ
47	ಬಡೂರು ಕೆರೆ (ಸಿಮಿಗೆಹಳ್ಳಿ ಕೆರೆ)	ಬೆಳವಾಡಿ-15, 16, 17, 23, ಪುಟಕಂಡ-55 ಮಿಳ್ಳೆ ಸಂಖ್ಯಾಗಳ್ಳಿ-12	100.00	30.00
48	ಮೂಲ್ಲು ಚಿಕ್ಕಕೆರೆ	ಬೋಡ್ಡಿ-70	13.00	15.00
49	ಮೂಲ್ಲು ದೊಡ್ಡ ಕೆರೆ	ಮಿಳ್ಳೆ-0150	96.00	38.00
		ಮಿಳ್ಳೆ ಅಗ್ರಾಣ-0037	17.00	1.00
ಭೈರಸಮುದ್ರಹೋಬಳಿ ಕೆರೆಗಳು				
50	ನಾಯಿಂಡಹಳ್ಳಿ ಕೆರೆ	ನಾಯಿಂಡಹಳ್ಳಿ-0053,	13.00	9.00
51	ಹಾರೋಹಳ್ಳಿ ಕೆರೆ	ಹಾರೋಹಳ್ಳಿ-0081	74.00	32.00
52	ತಿಂಡ್ಲು ಕೆರೆ (ದೊಡ್ಡಮೊಮ್ಮಸಂದ್ರ ಕೆರೆ)	ತಿಂಡ್ಲು -0033,	39.00	28.00
		ದೊಡ್ಡಮೊಮ್ಮಸಂದ್ರ -0056	59.00	10.00
		ಕೋಲಿಗೆಹಳ್ಳಿ -1175	49.00	21.00
53	ಕಲ್ಲರ	ಕಲ್ಲರ -0055,	78.00	11.00
		ಕೈಲಾಸನಹಳ್ಳಿ -0056,	91.00	19.00
		ಜಾಲಿವಾರಿ-101,	0.00	67.00
		ಕೋಂಡಮಾವು ಅಗ್ರ-0056	61.00	11.00
54	ಮಾದಪ್ಪನಹಳ್ಳಿ ಕೆರೆ	ಮಾದಪ್ಪನಹಳ್ಳಿ ಸರ್ವೆ-7	26.00	23.00

55	ಕುಂದಲಹಳ್ಳಿ	ಕುಂದಲಹಳ್ಳಿ-05	60.00	20.00
56	ಚಳ್ಳಕೆರೆ	ಚಳ್ಳಕೆರೆ-85	38.00	5.00
57	ಕಬ್ಬಗೆನಹಳ್ಳಿ ಕೆರೆ/ಪಾಲನಹಳ್ಳಿ ಕೆರೆ	ಕಬ್ಬಗೆನಹಳ್ಳಿ -0136	25.00	28.00
58	ನರಸೀಪುರ ಕೆರೆ	ನರಸೀಪುರ-26	9.00	7.00
59	ಕಮ್ಮಗೊಂಡನಹಳ್ಳಿ ಕೆರೆ	ಕಮ್ಮಗೊಂಡನಹಳ್ಳಿ-0018.	23.00	15.00
		ಶಿಬಿಹಳ್ಳಿ -0067		
		ಮೈದಾರಹಳ್ಳಿ -0028.		
60	ಜೀಮನಕಟ್ಟೆ	ಜೀಮನಕಟ್ಟೆ-138	1.00	23.00
61	ಹೆಚ್.ಗೊಲ್ಲಹಳ್ಳಿ ಕೆರೆ	ಹೆಮ್ಮಿಗೆಪುರ-0025	7.00	25.00
		ಕೆ. ಗೊಲ್ಲಹಳ್ಳಿ-0009	7.00	8.00
		ವರಹಸಂದ್ರ-0009	4.00	33.00
62	ಜೋಗಿ ಕೆರೆ	ಮಲ್ಲಸಂದ್ರ -30	3.00	2.00
63	ಬಯ್ಯಪ್ಪನಹಳ್ಳಿ ಕುಂಟೆ	ವಾಜರಹಳ್ಳಿ-35	2.00	31.00
	ಟಂಡರ್ ಪ್ರಕ್ರಿಯೆಯಲ್ಲಿರುವ ಕೆರೆಗಳು			
64	ಮಂಗಮ್ಮನಪಾಳ್ಯ ಕೆರೆ	ಯಲುಗುಂಟೆ-19	8.00	0.00
65	ಕೊಡಗಿ ಸಿಂಗಸಂದ್ರ ಕೆರೆ	ಸಿಂಗಸಂದ್ರ-59	10.00	23.00
66	ಬಸಮರ ಕೆರೆ-1	ಬಸಮರ-19	9.00	34.00
		ಸಿಂಗಸಂದ್ರ-52	1.00	8.00

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅನುಬಂಧ–2

2013–14 ಮತ್ತು 2014–15 ನೇ ಸಾಲಿನಲ್ಲಿ ಅಭಿವೃದ್ಧಿ ಪಡಿಸಿರುವ ಕೆರೆಗಳ ವಿಚ್ಛೇದ ವಿವರ

ಕ್ರಮ ಸಂಖ್ಯೆ	ಕೆರೆಯ ಹೆಸರು	ಮಂಜೂರಾದ ಅನುದಾನ ವಿವರ (ರೂ.ಲಕ್ಷಗಳಲ್ಲಿ)	
		2013–14	2014–15
1	ಗುಬ್ಬಿಯ ಕೆರೆ		
	ಗುಬ್ಬಿಯ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಹೂಳೆತ್ತಿದ ಕಾಮಗಾರಿಗಳಿಂದ ಹೊಳೆತೆರವು ಕಾಲುವೆಗಳ ಅಭಿವೃದ್ಧಿ, ಸೀಲ್ಡ್ ಬ್ರಾಜ್ ನಿರ್ಮಾಣ, ಕೆರೆಯ ಏರಿಯ ಮೇಲೆ ಪೇವ್ಡ್ ಫುಟ್‌ಪಾತ್ ಸಹಿತ ಪಾದಚಾರಿ ಮಾರ್ಗ, ಶೌಚಾಲಯ ನಿರ್ಮಾಣ ಮತ್ತು ಇತ್ಯಾದಿ		189.64
2.	ಅಬ್ಬಿಗೆರೆಯಿಂದ ಮೇಡಿಕೆರೆ ಕೆರೆ		
	ಅಬ್ಬಿಗೆರೆಯಿಂದ ಮೇಡಿಕೆರೆ ಕೆರೆ ಹಂತ–1 ರ ಅಭಿವೃದ್ಧಿ ಕಾಮಗಾರಿಗಳಾದ ಹೂಳೆತ್ತಿ ನೀರು ತಿರುವು ಗಾಲುವೆ, ಹೊಸ ಹೆಗ್ಗಳುವುದು. ಒಳಚರಿ ಮೆಟ್ಟಿ ಸೀಲ್ಡ್ ಬ್ರಾಜ್ ನಿರ್ಮಾಣ, ಕೆರೆಯ ಏರಿಯ ಮೇಲೆ ಪೇವ್ಡ್ ಫುಟ್‌ಪಾತ್ ಅಂಕ ತಂತಿ ಬೇಲಿ, ಆರ್‌ಸಿಸಿ ಡ್ರೈನ್ ನಿರ್ಮಾಣ, ಏರಿ ನವೀಕರಣ ಮತ್ತು ಇತ್ಯಾದಿ		65.68
4.	ಬಸವನಪುರ ಕೆರೆ		
	ಬಸವನಪುರ ಕೆರೆಯಲ್ಲಿ ಪೇವ್ಡ್ ಪಾತ್ ಅಂಕ್ ತಂತಿ ಬೇಲಿ ಅಳವಡಿಸುವ ಬಗ್ಗೆ	13.14	
	ಬಸವನಪುರ ಕೆರೆಯ ಹಂತ–1 ರ ಅಭಿವೃದ್ಧಿ ಕಾಮಗಾರಿಗಳಾದ ಹೂಳು ತೆಗೆಯುವುದು. ಏರಿ ನಿರ್ಮಾಣ, ಕೋಡಿ ನಿರ್ಮಾಣ, ಸೀಲ್ಡ್ ಬ್ರಾಜ್ ನಿರ್ಮಾಣ, ಕೊಳಚೆ ನೀರು ತಿರುವು ಗಾಲುವೆ ನಿರ್ಮಾಣ ಇತ್ಯಾದಿ	95.77	
	ಬಸವನಪುರ ಕೆರೆಯ ಹಂತ–2 ರ ಅಭಿವೃದ್ಧಿ ಕಾಮಗಾರಿಗಳಾದ ಪಾದಚಾರಿ ಸೇತುವೆ, ಕಾವಲುಗಾರರ ಕೊಠಡಿ, ವೆಟ್ ಲ್ಯಾಂಡ್, ಏರಿ ಮೇಲೆ ಇರತಿ ಟೇಕ ನಿರ್ಮಾಣ, ಆರ್‌ಸಿಸಿ ಚಡಿ ಗೋಡೆ, ಕಲ್ಯಾಣಿ ಮತ್ತು ಇತ್ಯಾದಿ		137.45
	ಬಸವನಪುರ ಕೆರೆಯಲ್ಲಿ 1 ಎಂಎಲ್‌ಡಿ ಕೊಳಚೆ ನೀರು ಸಂಸ್ಕರಣಾ ಘಟಕ	199.61	64.13
5	ಬಿದಾರಹಳ್ಳಿ ಕೆರೆ		
	ಬಿದಾರಹಳ್ಳಿ ಕೆರೆಯ ಹಂತ–3 ರ ಅಭಿವೃದ್ಧಿ ಕಾಮಗಾರಿಗಳಾದ ಆರ್‌ಸಿಸಿ ಕೊಳಚೆ ನೀರು ತಿರುವು ಗಾಲುವೆ, ಕಾವಲುಗಾರರ ಕೊಠಡಿ, ಬೋರ್‌ವೆಲ್ ಮತ್ತು ಇತ್ಯಾದಿ		50.28
6	ಹೊರ ಕೆರೆ		
	ಹೊರ ಕೆರೆಯ ಹಂತ–3 ರ ಅಭಿವೃದ್ಧಿ ಕಾಮಗಾರಿಗಳಾದ ಹೂಳೆ ತೆರವು ಕಾಲುವೆಗಳ ಅಭಿವೃದ್ಧಿ, ಸೀಲ್ಡ್ ಬ್ರಾಜ್ ನಿರ್ಮಾಣ, ಕೆರೆಯ ಏರಿಯ ಮೇಲೆ ಪೇವ್ಡ್ ಫುಟ್‌ಪಾತ್ ಅಂಕ ತಂತಿ ಬೇಲಿ ಶೌಚಾಲಯ ನಿರ್ಮಾಣ ಮತ್ತು ಇತ್ಯಾದಿ	133.94	
	ಹೊರ ಕೆರೆಯಲ್ಲಿ 1 ಎಂಎಲ್‌ಡಿ ಕೊಳಚೆ ನೀರು ಸಂಸ್ಕರಣಾ ಘಟಕ	10.52	10.53

ಕ್ರಮ ಸಂಖ್ಯೆ	ಕೆರೆಯ ಹೆಸರು	ಏರ್ಪಾಡ ಅನುದಾನ ವಿವರ (ರೂ.ಲಕ್ಷಗಳಲ್ಲಿ) (	
		2013-14	2014-15
7	ಹೆರೋಹಳ್ಳಿ ಕೆರೆ		
	ಹೆರೋಹಳ್ಳಿ ಕೆರೆಯ ಹಂತ-1 ರ ಅಭಿವೃದ್ಧಿ ಕಾಮಗಾರಿ	52.03	
	ಹೆರೋಹಳ್ಳಿ ಕೆರೆಯ ಹಂತ-2 ರ ಅಭಿವೃದ್ಧಿ ಕಾಮಗಾರಿ	60.00	
	ಹೆರೋಹಳ್ಳಿ ಕೆರೆಯಲ್ಲಿ 1.5 ಎಂಎಲ್‌ಡಿ ಕೊಳಚೆ ನೀರು ಸಂಸ್ಕರಣಾ ಘಟಕ	64.47	47.79
	ಹೆರೋಹಳ್ಳಿ ಕೆರೆಯಲ್ಲಿ ಉಳಿದ ಭಾಗಗಳಲ್ಲಿ ಚೈನ್ ಲಿಂಕ್ ತಂತಿ ಬೇಲಿ ಅಳವಡಿಸುವ ಸಲ್ಲ		19.85
8	ಕೈಗೊಂಡನಹಳ್ಳಿ ಕೆರೆ		
	ಕೈಗೊಂಡನಹಳ್ಳಿ ಕೆರೆಯ ಹಂತ-2 ರ ಅಭಿವೃದ್ಧಿ ಕಾಮಗಾರಿಗಳಾದ ಕೆರೆಯ ಗಡಿಗೆ ತಂತಿ ಬೇಲಿ ನಿರ್ಮಾಣ, ಏರಿ ಅಭಿವೃದಿ ಕಾಮಗಾರಿ, ಕಲ್ಯಾಣಿ ನಿರ್ಮಾಣ, ಕಾವಲುಗಾರರ ಕೊಠಡಿ, ಇತ್ಯಾದಿ	170.19	
	ಕೈಗೊಂಡನಹಳ್ಳಿ ಕೆರೆಯ ಹಂತ-3 ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಸೀಲ್ಡ್ ಬ್ರಿಡ್ಜ್ ನಿರ್ಮಾಣ.		95.56
9	ಕೊಡಿಹಳ್ಳಿ ಕೆರೆ		
	ಕೊಡಿಹಳ್ಳಿ ಕೆರೆಯ ಹಂತ-1 ರ ಅಭಿವೃದ್ಧಿ ಕಾಮಗಾರಿಗಳಾದ, ಕೋಡಿ ನಿರ್ಮಾಣ, ಕೆರೆ ಏರಿಗೆ ತಂತಿ ಬೇಲಿ ನಿರ್ಮಾಣ ಇತ್ಯಾದಿ		9.20
12	ಮುಟ್ಟೇನಹಳ್ಳಿ ಕೆರೆ		
	ಮುಟ್ಟೇನಹಳ್ಳಿ ಕೆರೆಯ ಹಂತ-3 ರ ಅಭಿವೃದ್ಧಿ ಕಾಮಗಾರಿಗಳಾದ ಪೊಚಾಲಯು ಗೇಟ್ಸ್, ಕ್ಷಲ್ಲಿಮು ಸುತ್ತಲೂ ಚೈನ್ ಲಿಂಕ್ ನಿರ್ಮಾಣ ಮತ್ತು ಇತ್ಯಾದಿ	14.80	
13	ಉತ್ತರಹಳ್ಳಿ ಕೆರೆ		
	ಉತ್ತರಹಳ್ಳಿ ಕೆರೆಯ ಹಂತ-3 ರ ಅಭಿವೃದ್ಧಿ ಕಾಮಗಾರಿಗಳಾದ, ಚೈನ್ ಲಿಂಕ್ ತಂತಿ ಬೇಲಿ, ಆರ್‌ಸಿಸಿ ಡ್ರೈನ್, ಗೇಜೆಬೋ.		78.00
	ಉತ್ತರಹಳ್ಳಿ ಕೆರೆಯಲ್ಲಿ 0.5 ಎಂಎಲ್‌ಡಿ ಕೊಳಚೆ ನೀರು ಸಂಸ್ಕರಣಾ ಘಟಕ		21.34
	ಉತ್ತರಹಳ್ಳಿ ಕೆರೆಯಲ್ಲಿ ಕೊಳಚೆ ನೀರು ತಿರುವು ಗಾಲುವೆ ಕಾಮಗಾರಿ	9.98	

ಕ್ರಮ ಸಂಖ್ಯೆ	ಕೆರೆಯ ಹೆಸರು	ಬಿಡುಗಡೆಯಾದ ಅನುದಾನ ವಿವರ (ರೂ.ಲಕ್ಷಗಳಲ್ಲಿ)	
		2013-14	2014-15
14	ಅ) ಉಪಹಾರ ಕೆರೆ		
	ಅ) ಉಪಹಾರ ಕೆರೆಯಲ್ಲಿ ಬೈನ್ ಲಂಕ್ ತಂತ್ರ ಬೇಲಿ ಅಳವಡಿಸುವ ಬಗ್ಗೆ		58.66
	ಅ) ಉಪಹಾರ ಕೆರೆಯಲ್ಲಿ ಹಂತ-1 ಪಾದಚಾರಿ ಸೇತುವೆ ನಿರ್ಮಾಣ	32.59	
	ಅ) ಉಪಹಾರ ಕೆರೆಯಲ್ಲಿ ಹಂತ-2 ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಹೂಳು ತೆಗೆಯುವುದು, ಕೋಡಿ ಮತ್ತು ಸೀಲ್ಟ್ ಟ್ರಾಪ್ ನಿರ್ಮಾಣ, ಕೆರೆಯ ಏರಿಯ ಮೇಲೆ ಬೈನ್ ಲಂಕ್ ತಂತಿ ಬೇಲಿ, ಆರ್‌ಸಿಸಿ ಡ್ರೈನ್ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ	122.53	229.46
15	ಹೆ) ಗೇವಡೆರಹಳ್ಳಿ ಕೆರೆ		
	ಹೆ) ಗೇವಡೆರಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಹೂಳು ತೆಗೆಯುವುದು, ಕೋಡಿ ಮತ್ತು ಸೀಲ್ಟ್ ಟ್ರಾಪ್ ನಿರ್ಮಾಣ, ಕೆರೆಯ ಏರಿಯ ಮೇಲೆ ಬೈನ್ ಲಂಕ್ ತಂತಿ ಬೇಲಿ, ಆರ್‌ಸಿಸಿ ಡ್ರೈನ್ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ	50.00	65.78

16	ಸ್ಯಾಂಡಿ ಕೆರೆ		
	ಸ್ಯಾಂಡಿ ಕೆರೆಯ ಆರ್‌ಸಿಸಿ ರೀಚ್ಯೆನಿಂಗ್ ವಾಲ್		102.49
17	ಹಲಸೂರು ಕೆರೆ		
	ಹಲಸೂರು ಕೆರೆಯಲ್ಲಿ ಏರಿ ಮೇಲೆ ತಂತಿ ಬೇಲಿ ಕಾಮಗಾರಿ		26.80
	ಹಲಸೂರು ಕೆರೆಯಲ್ಲಿ ಹೂಳು ತೆಗೆಯುವುದು, ಫುಟ್ ಪ್ರಿಡ್ಜ್ ಕಾಮಗಾರಿ	89.62	
18	ದೊಡ್ಡ ಬೊಮ್ಮಸಂದ್ರ ಕೆರೆ		
	ದೊಡ್ಡ ಬೊಮ್ಮಸಂದ್ರ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಕೋಡಿ ಮತ್ತು ಸೀಲ್ಟ್ ವ್ರಾಪ್ ನಿರ್ಮಾಣ, ಕೆರೆಯ ಏರಿಯ ಮೇಲೆ ಚೈನ್ ಆಂಕ್ ತಂತಿ ಬೇಲಿ, ಆರ್‌ಸಿಸಿ ಡ್ರೈನ್ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ	117.23	149.47
19	ಹೊಗಿ ಕೆರೆ		
	ಹೊಗಿ ಕೆರೆಯ ಚೈನ್ ಲಿಂಕ್ ತಂತಿ ಬೇಲಿ ನಿರ್ಮಾಣ	12.92	
20	ಶೀಗೆಹಳ್ಳಿ ಕೆರೆ		
	ಶೀಗೆಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಹೂಳು ತೆಗೆಯುವುದು, ಕೋಡಿ ಮತ್ತು ಸೀಲ್ಟ್ ವ್ರಾಪ್ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ	289.63	

ಕ್ರಮ ಸಂಖ್ಯೆ	ಕೆಲಸ ಹೆಸರು	ಖರ್ಚಿನ ಅನುಷ್ಠಾನ ವಿವರ (ರೂ.ಲಕ್ಷಗಳಲ್ಲಿ)	
		2013-14	2014-15
21	ಮಿಂಚಿನಾಮರ ಕೆರೆ		
	ಮಿಂಚಿನಾಮರ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಕೋಡಿ ಮತ್ತು ಸೀಲ್ಡ್ ಬ್ರಾಪ್ ನಿರ್ಮಾಣ, ಕೆರೆಯ ಏರಿಯ ಮೇಲೆ ಬೈನ್ ಲಂಕ್ ತಂತಿ ಬೇಲಿ, ಏರಿ ನಿರ್ಮಾಣ ಮತ್ತು ಇತ್ಯಾದಿ	125.53	55.71
22	ದೊಡ್ಡಸಂದ್ರ ಕೆರೆ		
	ದೊಡ್ಡಸಂದ್ರ ಕೆರೆಯ ಹಂತ-1 ರ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಕೋಡಿ ಮತ್ತು ಸೀಲ್ಡ್ ಬ್ರಾಪ್ ನಿರ್ಮಾಣ, ಕೆರೆಯ ಏರಿಯ ಮೇಲೆ ಬೈನ್ ಲಂಕ್ ತಂತಿ ಬೇಲಿ, ಏರಿ ನಿರ್ಮಾಣ ಮತ್ತು ಇತ್ಯಾದಿ		249.37
	ದೊಡ್ಡಸಂದ್ರ ಕೆರೆಯ ಹಂತ-2 ರ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೆರೆಯ ಏರಿ ಅಭಿವೃದ್ಧಿ, ಹಾಳಾಗಿದ್ದ ತಂತಿ ಬೇಲಿ ರಿಪೇರಿ, ಕೆರೆಯ ಏರಿಯ ಮೇಲೆ ಬೈನ್ ಲಂಕ್ ತಂತಿ ಬೇಲಿ.		44.12

23	ನರಸೀಪುರ ಕೆರೆ		
	ನರಸೀಪುರ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ತೋಡಿ ಮತ್ತು ಸೀಲ್ಟ್ ಟ್ರಾಪ್ ನಿರ್ಮಾಣ, ಕೆರೆಯ ಏರಿಯ ಮೇಲೆ ಬೈನ್ ಲಿಂಕ್ ತಂತಿ ಬೇಲಿ, ಏರಿ ನಿರ್ಮಾಣ, ಒಳ ಹರಿವು ಹಾಗೂ ಹೊರ ಹರಿವು ನಿರ್ಮಾಣ, ಪಾದಚಾರಿ, ಆಟ ಮೈದಾನ ಮತ್ತು ಇತ್ಯಾದಿ	76.93	
24	ಅಂಗಡಿಚಲನಹಳ್ಳಿ ಕೆರೆ		
	ಅಂಗಡಿಚಲನಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗ್ರಾಲುವೆ, ಹೂಳು ತೆಗೆಯುವುದು, ತೋಡಿ ಮತ್ತು ಸೀಲ್ಟ್ ಟ್ರಾಪ್ ನಿರ್ಮಾಣ, ಏರಿ ನಿರ್ಮಾಣ, ಒಳ ಹರಿವು ಹಾಗೂ ಹೊರ ಹರಿವು ನಿರ್ಮಾಣ, ಪಾದಚಾರಿ,ಕಾಲು ಸೇತುವೆ ನಿರ್ಮಾಣ, ಆಟ ಮೈದಾನ ಮತ್ತು ಇತ್ಯಾದಿ	163.59	
25	ಹಂಪ್ರಹಳ್ಳಿ ಕೆರೆ		
	ಹಂಪ್ರಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ತೋಡಿ ಮತ್ತು ಸೀಲ್ಟ್ ಟ್ರಾಪ್ ನಿರ್ಮಾಣ, ಏರಿ ನಿರ್ಮಾಣ, ಒಳ ಹರಿವು ಹಾಗೂ ಹೊರ ಹರಿವು ನಿರ್ಮಾಣ, ಪಾದಚಾರಿ,ಕಾಲು ಸೇತುವೆ ನಿರ್ಮಾಣ, ಆಟ ಮೈದಾನ ಮತ್ತು ಇತ್ಯಾದಿ		162.00

ಕ್ರಮ ಸಂಖ್ಯೆ	ಕೆರೆಯ ಹೆಸರು	ಮಿರ್ಜಾದ ಅನುದಾನ ವಿವರ (ರೂ.ಲಕ್ಷಗಳಲ್ಲಿ)	
		2013-14	2014-15
26	ಕ ಕಡ್ಲು ಡಕ್ಕಕೆರೆ		
	ಕೆ ಕಡ್ಲು ಚಕ್ಕ ಕೆರೆಯ ಹಂತ-1 ರ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಸೀ ಲ್ಲೂ ಬ್ರಾಚ್ ನಿರ್ಮಾಣ,ದಿರಿ ನಿರ್ಮಾಣ ಮತ್ತು ಇತ್ಯಾದಿ		160.00
	ಕ ಕಡ್ಲು ಚಕ್ಕ ಕೆರೆಯ ಹಂತ-1ರ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೋಡಿ ನಿರ್ಮಾಣ, ಕೆರೆಯ ಏರಿಯ ಮೇಲೆ ಟೈನ್ ಅಂಕ್ ಕೆ ಡಿಕೆ ಬೇಲಿ.		146.53
27	ಕ ಹುಣಿಚಡ್ಡ ಕೆರೆ		
	ಕ ಹುಣಿಚಡ್ಡ ಕೆರೆಯ ಹಂತ-1 ರ ಅಭಿವೃದ್ಧಿ ಕಾಮಗಾರಿಗಳಾದ, ಹೂಳು ತೆಗೆಯುವುದು, ಏರಿ ನಿರ್ಮಾಣ, ಕೋಡಿ ನಿರ್ಮಾಣ, ಸೀ ಲ್ಲೂ ಬ್ರಾಚ್ ನಿರ್ಮಾಣ, ಗೇಟು ಮತ್ತು ಇತ್ಯಾದಿ		40.44

28	ಅಪೆನಾಹಳ್ಳಿ ಕೆರೆ		
	ಅಕಲು ಕಟ್ಟುವಿಕೆಯ ಹಂತ-1ರ ಅಭಿವೃದ್ಧಿ ಕಾಮಗಾರಿಗಳಾದ ಹೂಳು ತೆಗೆಯುವುದು, ಏರಿ ನಿರ್ಮಾಣ, ಸೀಲ್ಡ್ ಬ್ರಾಪ್ ನಿರ್ಮಾಣ, ಗೇಟ್, ಗಿಡ ಬೇಲಿ, ಚೈನ್ ಲಿಂಕ್ ತಂತಿ ಬೇಲಿ ಮತ್ತು ಇತ್ಯಾದಿ		53.01
29	ರಾಮಗೊಂಡನಹಳ್ಳಿ		
	ರಾಮಗೊಂಡನಹಳ್ಳಿ ಕೆರೆಯ ಹಂತ-1ರ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಸೀಲ್ಡ್ ಬ್ರಾಪ್ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ		143.26
30	ಅಂತರಸನಹಳ್ಳಿ ಕೆರೆ		
	ಏರಿಯ ಭಾಗಕ್ಕೆ ಚೈನ್ ಲಿಂಕ್ ತಂತಿ ಬೇಲಿಯನ್ನು ಗಿಡಗಳಿಗೆ ಗೇಟು ಹಾಕುವುದು, ಮತ್ತು ಇತ್ಯಾದಿ		71.55
31	ಮುಸ್ಕೂರು ಕೆರೆ		
	ಮುಸ್ಕೂರು ಕೆರೆಯ ಹಂತ-1ರ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಸೀಲ್ಡ್ ಬ್ರಾಪ್ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ	155.29	96.05
32	ಹೇಮ್ಲಾವತಿ ಕೆರೆ		
	ಹೇಮಾವತಿ ಕೆರೆಯ ಹಂತ-1ರ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಸೀಲ್ಡ್ ಬ್ರಾಪ್ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ	159.59	75.23

ಕ್ರಮ ಸಂಖ್ಯೆ	ಕೆರೆಯ ಹೆಸರು	ಮಂಜೂರಾದ ಅನುದಾನ ವಿವರ (ರೂ.ಲಕ್ಷಗಳಲ್ಲಿ)	
		2013-14	2014-15
33	ಕಸವನಹಳ್ಳಿ ಕೆರೆ		
	ಕಸವನಹಳ್ಳಿ ಕೆರೆಯ ಹಂತ-1 ರ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಸೀಲ್ಡ್ ಟ್ರಾಪ್ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ	240.11	84.57
34	ಪರಪ್ಪನ ಅಗ್ರಹಾರ ಕೆರೆ		
	ಪರಪ್ಪನ ಅಗ್ರಹಾರ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಕೋಡಿ ಮತ್ತು ಸೀಲ್ಡ್ ಟ್ರಾಪ್ ನಿರ್ಮಾಣ, ಕೆರೆಯ ಏರಿಯ ಮೇಲೆ ಬೈನ್ ಅಂಕ್ ತಂತಿ ಬೇಲಿ ಏರಿ ನಿರ್ಮಾಣ ಮತ್ತು ಇತ್ಯಾದಿ		88.49
35	ಕೊಡ್ಲು ಮೊಡ್ಲ ಕೆರೆ		
	ಕೊಡ್ಲು ಮೊಡ್ಲ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳೆತ್ತು ತೆಗೆಯುವುದು, ಕೋಡಿ ಮತ್ತು ಸೀಲ್ಡ್ ಟ್ರಾಪ್ ನಿರ್ಮಾಣ, ಕೆರೆಯ ಏರಿಯ ಮೇಲೆ ಬೈನ್ ಆಂಕ್ ತಂತಿ ಬೇಲಿ, ಏರಿ ನಿರ್ಮಾಣ ಮತ್ತು ಇತ್ಯಾದಿ		259.62
36	ಹರಳೂರು ಕೆರೆ		
	ಹರಳೂರು ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಕೋಡಿ ಮತ್ತು ಸೀಲ್ಡ್ ಟ್ರಾಪ್ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ		168.37
37	ಸೌಳ್ ಕೆರೆ		
	ಸೌಳ್ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಕೋಡಿ ಮತ್ತು ಸೀಲ್ಡ್ ಟ್ರಾಪ್ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ	54.97	405.43
38	ಸಿಂಗಸಂದ್ರ ಕೆರೆ		
	ಸಿಂಗಸಂದ್ರ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಕೋಡಿ ಮತ್ತು ಸೀಲ್ಡ್ ಟ್ರಾಪ್ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ		204.07

ಕ್ರಮ ಸಂಖ್ಯೆ	ಕೆರೆಯ ಹೆಸರು	ಹಿರ್ಗಾದ ೀನುದಾನ ವಿವರ (ರೂ.ಲಕ್ಷಗಳಲ್ಲಿ)	
		2013-14	2014-15
39	ಅಗ್ರಹಾರ ಕೆರೆ		
	ಅಗ್ರಹಾರ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಕೋಡಿ ಮತ್ತು ಸೀಲ್ಡ್ ಟ್ರಾಪ್ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ		106.38
40	ಕಟ್ಟಿಗೇನಹಳ್ಳಿ ಕೆರೆ		
	ಕಟ್ಟಿಗೇನಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಕೋಡಿ ಮತ್ತು ಸೀಲ್ಡ್ ಟ್ರಾಪ್ ನಿರ್ಮಾಣ, ಏರಿ ಮೇಲೆ ಜೈನ್ ಆರಕ್ ತಂತಿ ಬೇಲಿ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ	116.50	156.23
41	ಹೊಸಹಳ್ಳಿ		
	ಹೊಸಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಚೆ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಕೋಡಿ ಮತ್ತು ಸೀಲ್ಡ್ ಟ್ರಾಪ್ ನಿರ್ಮಾಣ, ಏರಿ ಮೇಲೆ ಜೈನ್ ಆರಕ್ ತಂತಿ ಬೇಲಿ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ		149.37

42	ಕೊಗಿಲು ಕೆರೆ		
	ಕೊಗಿಲು ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಸೊಳಬಿ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಕೋಡಿ ಮತ್ತು ಸೀಲ್ಟ್ ಟ್ರಾಪ್ ನಿರ್ಮಾಣ, ಏರಿ ಮೇಲೆ ಟೈನ್ ಆರಕ್ ತಂತಿ ಬೇಲಿ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ		347.49
43	ತಿರುಮೇನಹಳ್ಳಿ ಕೆರೆ		
	ತಿರುಮೇನಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಬಿ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಕೋಡಿ ಮತ್ತು ಸೀಲ್ಟ್ ಟ್ರಾಪ್ ನಿರ್ಮಾಣ, ಏರಿ ಮೇಲೆ ಬೈನ್ ಆರಕ್ ತಂತಿ ಬೇಲಿ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ	116.87	116.86
44	ದೊಡ್ಡಕನ್ನೇಲಿ ಕೆರೆ		
	ದೊಡ್ಡಕನ್ನೇಲಿ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳಾದ ಕೊಳಬಿ ನೀರು ತಿರುವು ಗಾಲುವೆ, ಹೂಳು ತೆಗೆಯುವುದು, ಕೋಡಿ ಮತ್ತು ಸೀಲ್ಟ್ ಟ್ರಾಪ್ ನಿರ್ಮಾಣ, ಏರಿ ಮೇಲೆ ಟೈನ್ ಆರಕ್ ತಂತಿ ಬೇಲಿ ನಿರ್ಮಾಣ, ಏರಿ ನಿರ್ಮಾಣ ಮತ್ತು ಇತ್ಯಾದಿ	219.60	173.70
	ಒಟ್ಟು ಮೊತ್ತ	2967.95	4973.96

ಅನುಬಂಧ-೨

ಕ್ಷಾಮಕಾರಣ ವ್ಯಾಪ್ತಿಯಲ್ಲಿರುವ ಜೀವಂತ ಕೆರೆ/ಒಣಗಿದ ಕೆರೆ/ನಿರುಪಯುಕ್ತ ಕೆರೆಗಳ ವಿವರಗಳು

ಜೀವಂತ ಕೆರೆ						ಒಣಗಿದ ಕೆರೆ	
1	ಅಜ್ಜಗೆರೆ ಕೆರೆ	35	ಹರಳಹಳ್ಳಿ/ಸೋಮಸುಂದ್ರ ಕೆರೆ	69	ಹ್ಯಾಪ್ಪನಹಳ್ಳಿ ಕೆರೆ	1	ಬಿ ಚನ್ನಸಂದ್ರ ಕೆರೆ
2	ಅಮೃತಹಳ್ಳಿ ಕೆರೆ	36	ಹೂಡಿ ಕೆರೆ (ಗಿಡ್ಡನ ಕೆರೆ)	70	ಹೊಸದ್ದೂರು ಕೆರೆ-38	2	ದರಬೇನ ಅಗ್ರಹಾರ (ಚಿಕ್ಕಬಳ್ಳಿ)
3	ಅರಹಳ್ಳಿ/ಅಂಜನಾಮರ ಕೆರೆ	37	ಹೂಡಿ-1	71	ಹೊಸದ್ದೂರು ಕೆರೆ-48	3	ಭೀಮನಹಿಪ್ಪ ಕೆರೆ
4	ಆಣ್ಣಪ್ಪನ ಹಳ್ಳಿ/ಎಲುವನಹಳ್ಳಿ ಕೆರೆ	38	ಹೊಸಮಾವು	72	ಮ್ಯಾಗಳಗೆರೆ ಕೆಂಪೇನಹಳ್ಳಿ ಕೆರೆ	4	ಚನ್ನಸಂದ್ರ -2 ಕೆರೆ
5	ಆರಕೆರೆ ಕೆರೆ	39	ಹೊಸಮಾವು ಆಗರ	73	ಮ್ಯಾದುರು ಅಗ್ರಹಾರ-124	5	ಚಿಕ್ಕಬಳ್ಳಂಡೂರು ಕೆರೆ
6	ಇ. ನಾರಾಯಣಪುರ ಕೆರೆ	40	ಹೊಸಕೆರೆಹಳ್ಳಿ ಕೆರೆ	74	ರಾಚೇನಹಳ್ಳಿ ಕೆರೆ	6	ಚಿಕ್ಕಮನಹಳ್ಳಿ ಕೆರೆ
7	ಬಸಾಪುರ-2ಕೆರೆ	41	ಹೊಳಮಾವು ಕೆರೆ	75	ರಾಮಸಂದ್ರ ಕೆರೆ	7	ಚಿಕ್ಕಗೌಡನಹಳ್ಳಿ ಕೆರೆ
8	ಬಸವನಾಪುರ ಕೆರೆ	42	ಹೊಲ್ಲೂರು ಕೆರೆ	76	ವಿದುರಮಂಗಲ ಕೆರೆ	8	ದೇವರ ಕೆರೆ
9	ಬೇಗೂರು ಕೆರೆ	43	ಜಕ್ಕೂರು/ಸಂಪಿಗೆಹಳ್ಳಿ ಕೆರೆ	77	ಶಾಸ್ತ್ರಿಪುರಗೇನಹಳ್ಳಿ ಕೆರೆ	9	ಶಾರ್ಮಭಾವಿ ಕಾಳ್ಳ ಕೆರೆ
10	ಬೆಲ್ಲಹಳ್ಳಿ ಕೆರೆ	44	ಜಮಳೇನಹಳ್ಳಿ ಕೆರೆ	78	ತಿಮಹಳ್ಳಿ ಕೆರೆ	10	ಗುಂಜೂರು (ಶಾರ್ಮಲಾರಂ) ಕೆರೆ
11	ಬೆಳ್ಳಂದೂರು ಕೆರೆ	45	ಕೆ.ಆರ.ಪುರಂ (ದಿ.ಇ.ಎಂ.ಎಲ್) ಕೆರೆ	79	ಹಿಡ್ಕಾಮರ ಕೆರೆ	11	ಗುಂಜೂರು ಮೇಜ ಕೆರೆ
12	ಭುಟ್ಟರಹಳ್ಳಿ ಕೆರೆ	46	ಕಗ್ಗದಾಸಪುರ ಕೆರೆ	80	ಹಂಗಾಮರ ಕೆರೆ	12	ಕೆಂಬತ್ತಹಳ್ಳಿ ಕೆರೆ
13	ಭೋಗನಹಳ್ಳಿ ಕೆರೆ	47	ಹಾಳಿನ ಅಗ್ರಹಾರ ಕೆರೆ	81	ಹಾಪಾಡಾಂಪಾಳ್ಳ ಕೆರೆ	13	ಕೋನಪ್ಪನ ಅಗ್ರಹಾರ ಕೆರೆ
14	ಗರಹಂದ ಕೆರೆ/ಚಕ್ಕಸಂದ್ರ ಕೆರೆ	48	ಕೆಲೆಗೆ ಹಾಲಾಗರ ಕೆರೆ	82	ಹೆಂಜಾಪುರ ಕೆರೆ	14	ಗುಳ್ಳಗುರ್ಕಿ ಕೆರೆ
15	ಭೈರಸಂದ್ರ ಕೆಳಗಿನ ಕೆರೆ	49	ಕನ್ನಳ್ಳಿ ಕೆರೆ	83	ಶ್ರೀಗಂಧ ಕಾವಲ್ ಕೆರೆ	15	ಮ್ಯಾದುರು ಅಗ್ರಹಾರ-54 ಕೆರೆ

16	ಚಕ್ಕಡಾಚಾರ ಕೆರೆ	50	ಕೆಂಪನಮರ ಕೆರೆ	84	ಶ್ರೀನಿವಾಸಮರ ಕೆರೆ	16	ವಸಂತಮರ (ಜನ್ನಸಂದ್ರ) ಕೆರೆ
17	ಚಿಕ್ಕಬುಸವನಮರ ಕೆರೆ	51	ಕೊಮ್ಮಕ್ಕಿ ಕೆರೆ	85	ಸುಬ್ಬರಾಯನ ಕೆರೆ		
18	ಚಿಕ್ಕಮ್ಮ ಕೆರೆ	52	ಕೋಡಿನಕುಂಟೆ ಕೆರೆ	86	ಸುಬ್ಬಾರಾಯ ಕೆರೆ		ನಿರುಪಯುಕ್ತ ಕೆರೆ
19	ಚಿಕ್ಕದೇಗೂರು ಕೆರೆ	53	ಕೋಡಿಸಂದ್ರ ಕೆರೆ	87	ಸುಬ್ರಹ್ಮಣ್ಯಮರ ಕೆರೆ	1	ಗುಬ್ಬಿಗರ ಪಾಳ್ಯ ಕೆರೆ
20	ಚಿಕ್ಕಪುಟ್ಟಪ್ಪ ಕೆರೆ	54	ಕೊಕ್ಕಮರಿ ಕೆರೆ	88	ಹೊನ್ನಿ ಕೆರೆ	2	ಜನ್ನಸಂದ್ರ ಕೆರೆ
21	ಚುಂಚಘಟ್ಟು ಕೆರೆ	55	ಲಕ್ಷ್ಮಮರ ಕೆರೆ	89	ಹೊಸಕುಂಟೆ ಗುಡ್ಡ ಕೆರೆ	3	ಕಟ್ಟಾಕುಂಟೆ (ಪಾಯಿಜಾ ದೇವಸ್ಥಾನ ಬಳಿ)
22	ದೇವರಬೀಸನಹಳ್ಳಿ ಕೆರೆ	56	ರಿಂಗಪ್ಪೀರನಹಳ್ಳಿ ಕೆರೆ	90	ಹಲಸ್ಕಾಮರ ಕೆರೆ		
23	ದೊಡ್ಡದಬಿರಕ್ಕು ಕೆರೆ	57	ಮಾದಮರ ಕೆರೆ	91	ಹಾಲ್ಗಾಳ ಕೆರೆ		
24	ದೊಡ್ಡಕಲ್ಲುಸಂದ್ರ ಕೆರೆ	58	ಮಲ್ಲಸಂದ್ರಗುಡ್ಡೆ ಕೆರೆ	92	ಹಿಪ್ಪೆಗರಹಳ್ಳಿ ಕೆರೆ		
25	ದೊಡ್ಡನಕುಂಟಿ ಕೆರೆ	59	ಮಲ್ಲಿತಹಳ್ಳಿ ಕೆರೆ	93	ಹರಾಜಸಂದ್ರ ಕೆರೆ		
26	ದುದಾಪಾಳ್ಯ ಕೆರೆ	60	ಮುಂಗಸಹಳ್ಳಿ ಕೆರೆ	94	ಹರ್ಕೂರು ಕೆರೆ		
27	ಗಾಂಧಿನಗರ-ಹೊಸಕೆರೆಹಳ್ಳಿ ಕೆರೆ	61	ಮೇಗಿ ಅಗ್ರಹಾರ ಕೆರೆ	95	ಹೆಂಗಸೇರಮರ ಕೆರೆ		
28	ಗಂಗಸಬ್ಬಿ ಕೆರೆ	62	ಮೋದಾಪಿ ಕೆರೆ	96	ಹೆಬ್ಬೂತಿಮರ ಕೆರೆ		
29	ಗರುಡಾಚಾರ ಪಾಳ್ಯ-1 (ಅಚ್ಚಕಟ್ಟು) ಕೆರೆ	63	ಮೋಸಿಪಾಳ್ಯ ಕೆರೆ	97	ಹೆಸ್ಕೂಡಿ ಕೆರೆ		
30	ಗರುಡಾಚಾರ ಪಾಳ್ಯ-2 (ಗೋಶಾಲೆ) ಕೆರೆ	64	ನಾಗರಮಾವಿ ಕೆರೆ	98	ಹೆಳ್ಳಗನಹಳ್ಳಿ ಕೆರೆ		
31	ಗೊಬ್ಬಿಗರೆ ಕೆರೆ	65	ನಾಗೇಶ್ವರ ನಾಗನಹಳ್ಳಿ ಕೆರೆ				
32	ಗೌಡನಪಾಳ್ಯ ಕೆರೆ	66	ನಿಲ್ಲೂರಹಳ್ಳಿ ಕೆರೆ				
33	[illegible]	[illegible]	[illegible]				
34	ಗುಂಪಿಯ ಪಾಳ್ಯ	68	ನಿಲಗದರೇನಹಳ್ಳಿ ಕೆರೆ				